ಪಿಡಬ್ಲ್ಯೂ ಃ 1 ಒ.ಎಸ್. ಸಂಖ್ಯೆಃ 48/2014

ದಿನಾಂಕಃ 23.06.2015 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ಃ ಶ್ರೀ.ಎಸ್.ಎಸ್. ಬಿ. ವಕೀಲರಿಂದ

ನಗರ ಸಭೆಯವರು ನಮ್ಮ ಅಂಗಡಿಯನ್ನು ಯಾವ ದಿನಾಂಕದಂದು ಕೆಡವಲು ಬಂದಿದ್ದರು ಎಂದರೆ ಸಾಕ್ಷಿಯು ಬಂದಿರಲಿಲ್ಲ ಎಂದು , ಮುಂದುವರಿದು ಹೇಳುತ್ತಾರೆ ಪೇಪರ್‌ನಲ್ಲಿ ಬಂದಿರುವುದನ್ನು ನೋಡಿ ಈ ದಾವೆಯನ್ನು ಹಾಕಿರುತ್ತಾರೆ. ನಮ್ಮ ಅಂಗಡಿಯನ್ನು ಹೊಡೆದುಹಾಕಬೇಕು ಎಂದು ನಗರಸಭೆಯವರು ತೀರ್ಮಾನ ಮಾಡಿದ ಠರಾವು ಅನ್ನು ನಾನು ಹಾಜರು ಮಾಡಿರುವುದಿಲ್ಲ. ನಗರಸಭೆ ಅಧಿಕಾರಗಳು ನನಗೆ ಖಾಲಿ ಮಾಡಿ ಎಂದು ನೋಟೀಸ್ ಕೊಟ್ಟಿರುವುದಿಲ್ಲ.

ಪಿಡಬ್ಲ್ಯೂ : 1   ಓ.ಎಸ್. ಸಂಖ್ಯೆ: 48/2014

ದಿನಾಂಕ: 11.02.2014 ರಲ್ಲಿ ವಾಜ್ಯ ಕಾರಣ ಏನು ಉಂಟಾಗಿದೆ ಎಂದು ನನಗೆ ಗೊತ್ತಿಲ್ಲ. ನಗರಸಭೆಯವರು ಬಸ್ ನಿಲ್ದಾಣವನ್ನು ನಿರ್ಮಿಸುವ ವಿಚಾರದಿಂದ ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ ಆದರೆ ಮುಂದೆ ಆಗುವುದೆಂದು ಈ ದಾವಾ ಹಾಕಿದ್ದೇನೆ. ಮುಂದೆ ಯಾವಾಗ ಆಗಬಹುದು ಎಂದು ನನಗೆ ಗೊತ್ತಿಲ್ಲ. ದಿನಾಂಕ: 26.10.2009 ರಂದು ನಾನು ಮಾಡಿಕೊಂಡಿರುವ ಕರಾರಿಗೆ ಸರ್ಕಾರದಿಂದ ಯಾವುದೇ ಅನುಮತಿ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಕಟ್ಟಡಗಳನ್ನು ಮತ್ತು ನನ್ನ ಅಂಗಡಿಯನ್ನು ನೆಲಸಮ ಮಾಡುವ ಯಾವುದೇ ಘಟನೆ ನಡೆದಿಲ್ಲ ಎಂದರೆ ಸಾಕ್ಷಿಯು ಈಗ ಏನೂ ನಡೆದಿಲ್ಲ ಎಂದು ನುಡಿಯುತ್ತಾರೆ. ನಾನು ನಗರಸಭೆಗೆ ತೊಂದರೆಕೊಡಬೇಕೆಂದು ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ
ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ ನ್ಯಾ ದಂ ಕೊಳ್ಳೇಗಾಲ